ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ:2284/2017

ಚಾಸಾ:3 ಪ್ರಾಸಾ:3

ದಿನಾಂಕ: 07.11.2023

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ನವೀನ್ ರಾವ್ |
| ತಂದೆಯ ಹೆಸರು | : | ಕೆ. ನೀಲಕಂಠ ರಾವ್ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಫ್ಯಾಕ್ಟರಿ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಭಾ. ದಂ. ಪ್ರ, ಸಂ, ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು ದಶಮಿ ಇನಫ್ರಾಸ್ಟ್ರಚರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ರವರು ನಿರ್ಮಿಸುತ್ತಿದ್ದ ಕಟ್ಟಡದಲ್ಲಿ ಸುಪ್ರವೈಸರ್ ಆಗಿ ಕೆಲಸ ಮಾಡುತ್ತಿದ್ದೆ. 2013 ರಲ್ಲಿ ನಾನು ಸೈಟ್ ನಲ್ಲಿ ಕೆಲಸ ಮಾಡುತ್ತಿದ್ದಗ ಯಾರೋ ಸರ ತೆಗೆದುಕೊಂಡು ಹೋಗಿರುವುದಾಗಿ ಮಾತನಾಡುತ್ತಿದ್ದು, ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ದಿ: 26-10-2013 ರಂದು ಬೆಳಿಗ್ಗೆ 8 ಗಂಟೆಗೆ ನಾನು ಕೆಲಸ ಮಾಡುತ್ತಿದ್ದಾಗ 8-45 ಸಮಯಕ್ಕೆ ನಾನು ಸೈಟಿನ ಹೊರಭಾಗದಲ್ಲಿ ಕೆಲಸ ಮಾಡಿಸುತ್ತಿದ್ದೆ.ಆಗ ರಾಮ ಮಂದಿರದ ಕಡೆಯಿಂದ ಪೋಸ್ಟ್ ಆಫೀಸ್ ಕಡೆಗೆ ಒಂದು ಕಪ್ಪು ಮೋಟಾರು ಸೈಕಲಿನಲ್ಲಿ

ಇಬ್ಬರು ವೇಗವಾಗಿ ನಮ್ಮ ಸೈಟಿನ ಎದುರಿನಿಂದ ಹೋಗಿದ್ದು, ಮೋಟಾರು ಸೈಕಲಿನ ಚಾಲಕ ಹೆಲ್ಮೇಟ್ ಧರಿಸಿದ್ದು, ಮೋಟಾರು ಸೈಕಲಿಗೆ ನಂಬರ್ ಪ್ಲೇಟ್ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಮೋಟಾರು ಸೈಕಲ್ ಸವಾರರು ಹೋಗುತ್ತಿರುವುದನ್ನು ನೋಡುತ್ತಿದ್ದಾಗ ನಮ್ಮ ಸೈಟಿನಿಂದ ಸುಮಾರು 100 ಮೀಟರ್ ದೂರದಲ್ಲಿ ಒಬ್ಬ ಮಹಿಳೆ ಪೋಸ್ಟ್ ಆಫೀಸ್ ಕಡೆಯಿಂದ ರಾಮ ಮಂದಿರದ ರಸ್ತೆಯ ಕಡೆಗೆ ಪಶ್ಚಿಮದ ಅಂಚಿನಲ್ಲಿ ನಡೆದುಕೊಂಡು ಬರುತ್ತಿದ್ದು,ಆಗ ಮೋಟಾರು ಸೈಕಲ್ ಸವಾರ ಅವರ ಬಳಿ ಮೋಟಾರು ಸೈಕಲ್ ನಿಲ್ಲಿಸಿದ್ದು, ಮೋಟಾರು ಸೈಕಲ್ ನ ಹಿಂದುಗಡೆ  ಕುಳಿತ ವ್ಯಕ್ತಿ ಇಳಿದು ಮಹಿಳೆಯ ಕುತ್ತಿಗೆಯಲ್ಲಿದ್ದ ಸರವನ್ನು ಬಲತ್ಕಾರವಾಗಿ ಎಳೆದರು ಎಂದರೆ ಸರಿಯಲ್ಲ.

ಆ ಮಹಿಳೆ ಬೊಬ್ಬೆ ಹಾಕಿದ್ದು, ಜನರು ಸೇರುವಷ್ಟರಲ್ಲಿ ಆತ ಬೈಕಿನಲ್ಲಿ ಕುಳಿತುಕೊಂಡು ಮೋಟಾರು ಸೈಕಲಿನಲ್ಲಿ ಪೋಸ್ಟ್ ಆಫೀಸು ಕಡೆ ಚಲಾಯಿಸಿಕೊಂಡು ಹೋದರು ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ಸೈಟಿನಲ್ಲಿ ಕೆಲಸ ಮಾಡುತ್ತಿದ್ದವರು ಬೊಬ್ಬೆ ಹಾಕುತ್ತಿದ್ದ ಮಹಿಳೆಯ ಬಳಿ ಹೋದಾಗ ಆಕೆ ಬೈಕಿನಲ್ಲಿ ಇಳಿದು ಬಂದ ವ್ಯಕ್ತಿ ತನ್ನ ಕುತ್ತಿಗೆಯಲ್ಲಿದ್ದ 3 ವರೆ ಪವನ್ ಚಿನ್ನದ ಕರಿಮಣಿ ಸರವನ್ನು ಎಳೆದುಕೊಂಡು ಹೋದ ಎಂದು ಬೊಬ್ಬೆ ಹಾಕಿರುತ್ತಾರೆ ಎಂದರೆ ಸರಿಯಲ್ಲ.

ನಾನು ಕೂಡಲೇ ಸೈಟಿನಲ್ಲಿದ್ದ ನನ್ನ ಮೋಟಾರು ಸೈಕಲಿನಲ್ಲಿ ಸರ ಎಳೆದುಕೊಂಡು ಹೋದ ಮೋಟಾರು ಸೈಕಲ್ ಸವಾರರನ್ನು ಹಿಂಬಾಲಿಸಿಕೊಂಡು ಕುಂದಾಪುರ ಸಂಗಮ್ ಜಂಕ್ಷನ್ ಬಳಿ ಹೋಗಿದ್ದು, ಆ ವ್ಯಕ್ತಿಗಳು ಯಾವ ಕಡೆ ಚಲಾಯಿಸಿಕೊಂಡು ಹೋದರೆಂದು ತಿಳಿಯದೆ ವಾಪಸ್ಸು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಂತರ ಆ ಮಹಿಳೆಯ ಬಗ್ಗೆ ವಿಚಾರಿಸಿದಾಗ ಆಕೆಯ ಹೆಸರು  ಲಲಿತಾ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಮೋಟಾರು ಸೈಕಲ್ ಸವಾರ ಕಪ್ಪು ಬಣ್ಣದ ಅಂಗಿ ಧರಿಸಿದ್ದು ಹಾಗೂ ಕಪ್ಪು ಬಣ್ಣದ ಹೆಲ್ಮೇಟ್ ಧರಿಸಿದ್ದು ಅವರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿರುತ್ತೇನೆಂದರೆ ಸರಿಯಲ್ಲ. ಈ ಮೇಲೆ ಹೇಳಿದಂತೆ ಪೊಲೀಸರ ಮುಂದೆ ದಿಃ 26-10-2013 ರಂದು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

ದಿಃ28-11-2013 ರಂದು ಪೊಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದ್ರಿ ಮರುಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿಗಳು ತಲೆಮರೆಸಿಕೊಂಡಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**